ಮನಸ್ವಿನಿ ಮತ್ತು ಮೈತ್ರಿ

ನೊಂದವರಿಗೆ ಸಾಂತ್ವನ

ನಲವತ್ತು ವರ್ಷ ದಾಟಿದ ಅವಿವಾಹಿತ/ ವಿಚ್ಛೇದಿತ / ಪರಿತ್ಯಕ್ತ ಮಹಿಳೆಯರ ಬಾಳಿನಲ್ಲಿ ಬೆಳಕಿನ ಕಿರಣ ಮೂಡಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 2013-14ರ ಬಜೆಟ್‌ನಲ್ಲಿ ಘೋಷಿಸಿದ್ದ 'ಮನಸ್ವಿನಿ' ಯೋಜನೆ ಜಾರಿಯಾಗಿದೆ ಹಾಗೆಯೇ, ಸಮಾಜದಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಗಿರುವ ಲಿಂಗ ಅಲ್ಪಸಂಖ್ಯಾತರಿಗಾಗಿ ರೂಪಿಸಿರುವ 'ಮೈತ್ರಿ' ಯೋಜನೆಯೂ ಅನುಷ್ಠಾನಗೊಂಡಿದೆ.

ಕಂದಾಯ ಸಚಿವ ವಿ. ಶ್ರೀನಿವಾಸ ಪ್ರಸಾದ್‌ರ ಕನಸಿನ ಯೋಜನೆಗಳಾಗಿರುವ **'ಮನಸ್ವಿನಿ'** ಮತ್ತು **'ಮೈತ್ರಿ'** ಯೋಜನೆಗಳು 2013ರ ಆಗಸ್ಟ್ ತಿಂಗಳಿನಿಂದ ಅನ್ವಯವಾಗುವಂತೆ ಕಂದಾಯ ಇಲಾಖೆಯ ಅಡಿಯಲ್ಲಿ ರಾಜ್ಯಾದ್ಯಂತ ಜಾರಿಗೊಂಡು ಹೋಬಳಿ ಮಟ್ಟದಲ್ಲಿರುವ ಜನಸ್ನೇಹಿ ಕೇಂದ್ರಗಳಲ್ಲಿ ಅರ್ಜಿ ಸ್ವೀಕಾರವೂ ಆರಂಭಗೊಂಡಿದೆ. ಅರ್ಜಿ ಸ್ವೀಕರಿಸಿದ 30 ದಿನದೊಳಗೆ ವಾಸಸ್ಥಳ ದೃಢೀಕರಣ ಮಾಡಿಕೊಂಡು 500 ರೂ.ಗಳ ಮಾಸಾಶನವನ್ನು ನೀಡಲಾಗುತ್ತಿದೆ.

'ಮನಸ್ವಿನಿ'

ಕುಟುಂಬದವರು ಮದುವೆ ಮಾಡದ ಕಾರಣಕ್ಕೋ ಇಲ್ಲವೆ ಸೂಕ್ತ ಸಮಯದಲ್ಲಿ ವರ ಸಿಗದೇ ಅಥವಾ ಇನ್ನಾವುದೋ ಕಾರಣಕ್ಕಾಗಿ ಮದುವೆಯಾಗದೇ ಉಳಿದ ಮಹಿಳೆಯರ ಬದುಕು ದುಸ್ತರ. ಇಂತಹ ಮಹಿಳೆಯರಿಗೆ ಪ್ರತಿ ತಿಂಗಳು 500 ರೂ. ಮಾಸಾಶನ ನೀಡುವ ಯೋಜನೆಯೇ 'ಮನಸ್ವಿನಿ'. ವಿಚ್ಛೇದಿತರು ಹಾಗೂ ಗಂಡ ತೊರೆದ ಮಹಿಳೆಯರು (ಪರಿತ್ಯಕ್ತರು) ಸಹ ಈ ಯೋಜನೆಯ ಲಾಭ ಪಡೆದುಕೊಳ್ಳಲು ಅರ್ಹರಾಗಿದ್ದಾರೆ. ವಿಚ್ಛೇದಿತರು ನ್ಯಾಯಾಲಯದಿಂದ ಪಡೆದ ವಿಚ್ಛೇದನಾ ಪತ್ರ ಅಥವಾ ಸ್ವಯಂ ದೃಢೀಕರಣ ಪತ್ರ ನೀಡಿದರೂ ಸಾಕು, ಯೋಜನೆಯ ಲಾಭ ಪಡೆದುಕೊಳ್ಳಬಹುದು. ಇದರಡಿ ಒಟ್ಟು 12 ಸಾವಿರ ಅರ್ಹ ಮಹಿಳೆಯರು ಪ್ರಯೋಜನ ಪಡೆದುಕೊಂಡಿದ್ದಾರೆ.

'ಮೈತ್ರಿ'

ಲಿಂಗ ಅಲ್ಪಸಂಖ್ಯಾತರೆಂದು ತಮ್ಮನ್ನು ಗುರುತಿಸಿಕೊಳ್ಳುವ ಸಮುದಾಯದವರಿಗಾಗಿ ಇದೇ ಮೊದಲ ಬಾರಿಗೆ 'ಮೈತ್ರಿ' ಯೋಜನೆಯನ್ನು ಸರಕಾರ ರೂಪಿಸಿದೆ. ದೈಹಿಕ ಮತ್ತು ಮಾನಸಿಕ ಕಾರಣಕ್ಕೆ ಲಿಂಗಪರಿವರ್ತನೆ ಮಾಡಿಸಿಕೊಂಡವರು ಅಥವಾ ದೈಹಿಕ ತೊಂದರೆಯಿಂದ ಹಿಜ್ರಾಗಳೆಂದು ಗುರುತಿಸಿಕೊಂಡವರು ಕುಟುಂಬದವರಿಂದ ದೂರವಾಗಿ ನಗರಗಳಿಗೆ ವಲಸೆ ಬಂದು ವಾಸಿಸುತ್ತಿದ್ದಾರೆ. ಈ ಸಮುದಾಯದ ಬಹುತೇಕರು ಅವಿದ್ಯಾವಂತರಾಗಿದ್ದು, ಉದ್ಯೋಗವೆಂಬುದು ಮರೀಚಿಕೆ. ಹಾಗಾಗಿಯೇ ಬಹುತೇಕರು ಭಿಕ್ಷಾಟನೆ ಅಥವಾ 'ಇನ್ನಿತರ' ಅನಿಷ್ಟ ವೃತ್ತಿಗೆ ಅನಿವಾರ್ಯವಾಗಿ ಇಳಿದಿದ್ದಾರೆ.

ಈಗಾಗಲೇ ಚುನಾವಣೆ ಆಯೋಗದಲ್ಲಿ 'ಇತರೆ' (ಹೆಣ್ಣು-ಗಂಡು ಅಲ್ಲದವರು) ಎಂದು ಪಟ್ಟಿಯಡಿ ನೋಂದಾಯಿಸಿಕೊಂಡವರು 2125 ಮಂದಿ ಇದ್ದಾರೆ. ಈ ಯೋಜನೆಯಡಿ 215 ಮಂದಿ ಫಲಾನುಭವಿಗಳಿಗೆ ಮಾಸಾಶನ ನೀಡಲಾಗುತ್ತಿದೆ. ಇತ್ತೀಚೆಗಷ್ಟೇ ಸುಪ್ರೀಂ ಕೋರ್ಟ್ ಸಹ ಲಿಂಗಅಲ್ಪಸಂಖ್ಯಾತರಿಗೆ ಮಾನ್ಯತೆ ನೀಡಿ, ಉದ್ಯೋಗ ಮತ್ತು ಶಿಕ್ಷಣದಲ್ಲಿ ಮೀಸಲಾತಿ ನೀಡುವುದನ್ನು ಕಡ್ಡಾಯಗೊಳಿಸಿದೆ.

ಕ್ರಿಮಿನಲ್ ಕೇಸು : ಇಂತಹ ಸಾಮಾಜಿಕ ಭದ್ರತಾ ಯೋಜನೆ ದುರ್ಬಳಕೆಯಾಗುತ್ತಿರುವುದನ್ನು ತಡೆಯಲು ಇದೇ ಮೊದಲ ಬಾರಿಗೆ ಅನರ್ಹರು ಅರ್ಜಿ ಸಲ್ಲಿಸಿದರೆ ಕ್ರಿಮಿನಲ್ ಮೊಕದ್ದಮೆ ಹೂಡುವುದಾಗಿ ಸರ್ಕಾರವು ಸ್ಪಷ್ಟ ಎಚ್ಚರಿಕೆಯನ್ನು ರವಾನಿಸಿದೆ. ಅರ್ಹರಲ್ಲದವರು ಸುಳ್ಳು ದಾಖಲೆ ನೀಡಿ ಅರ್ಜಿ ಸಲ್ಲಿಸಿ, ಫಲಾನುಭವಿಗಳಾದರೆ ಕಾನೂನುರೀತ್ಯ ಶಿಕ್ಷಿಸುವ ಹಕ್ಕನ್ನು ಸರ್ಕಾರ ಕಾಯ್ದಿರಿಸಿಕೊಂಡಿದೆ.